# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./ /ಅಂ.ಕಾ.ಅಂ.ವ.ಮ.ಕ್ರೀ.ಕೂ./2023-2024 ದಿನಾಂಕ : 06.07.2023

ಗೆ,

ಪ್ರಾಂಶುಪಾಲರುಗಳು
ಮೈಸೂರು ವಿಶ್ವವಿದ್ಯಾನಿಲಯದ
ಸಂಯೋಜಿತ ಮತ್ತು ನಿಯೋಜಿತ ಕಾಲೇಜುಗಳು

ಮಾನ್ಯರೆ,

ವಿಷಯ: 2022-2023ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಮಹಿಳೆಯರ ಕ್ರೀಡಾ ಕೂಟದ ಬಗ್ಗೆ

* * * * *

ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಮಹಿಳೆಯರ ಕ್ರೀಡಾ ಕೂಟವನ್ನು ದಿನಾಂಕ: 15-07-2023 ರಿಂದ 17-07-2023 ರವರೆಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರ ಆಶ್ರಯದಲ್ಲಿ ಬ್ಯಾಡ್‌ಮಿಂಟನ್ (ಷಟಲ್), ಬಾಲ್‌ಬ್ಯಾಡ್ಮಿಂಟನ್, ಥ್ರೋಬಾಲ್, ವಾಲಿಬಾಲ್, ಕಬಡ್ಡಿ, ಟೆನ್ನಿಕಾಯ್ಟ್, ಖೋ-ಖೋ, ಹ್ಯಾಂಡ್‌ಬಾಲ್, ಸಾಫ್ಟ್‌ಬಾಲ್, ಚೆಸ್, ಟೇಬಲ್ ಟೆನ್ನಿಸ್, ಬ್ಯಾಸ್ಕೆಟ್‌ಬಾಲ್ ಮತ್ತು ಟೆನ್ನಿಸ್ ಪಂದ್ಯಾವಳಿಗಳನ್ನು ನಡೆಸಲಾಗುವುದು ದಿನಾಂಕ: 15.07.2023ರಂದು ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವ ಕಾಲೇಜುಗಳ ಕ್ರೀಡಾಪಟುಗಳು ಸಮವಸ್ತ್ರದೊಂದಿಗೆ ಮತ್ತು ಕಾಲೇಜಿನ ಧ್ವಜದೊಂದಿಗೆ ಬೆಳಗ್ಗೆ 9.30ಘಂಟೆಗೆ ಟೌನ್‌ಹಾಲ್, ಹುಣಸೂರು ನಗರ ಸಭೆ ಮೈದಾನದಲ್ಲಿ ಕಡ್ಡಾಯವಾಗಿ ಹಾಜರಿರಲು ಸೂಚಿಸಿದೆ.

ದಿನಾಂಕ: 10.07.2023ರಂದು ಪ್ರವೇಶ ಪತ್ರಗಳನ್ನು ಸ್ವೀಕರಿಸಲು ಕಡೆಯ ದಿನಾಂಕವಾಗಿದ್ದು, ನಿಗದಿತ ಅವಧಿಯೊಳಗೆ ಲಗತ್ತಿಸಿರುವ ಪ್ರವೇಶ ಪತ್ರಗಳನ್ನು ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಕಳುಹಿಸಬೇಕಾಗಿ ವಿನಂತಿ. ದಿನಾಂಕ: 11.07.2023ರಂದು ಬೆಳಗ್ಗೆ 11.30ಕ್ಕೆ ನಿರ್ದೇಶಕರ ಕೊಠಡಿಯಲ್ಲಿ ತಳಕು ಪಟ್ಟಿಯನ್ನು ಹಾಕಲಾಗುವುದು.

ವಿಶೇಷ ಸೂಚನೆ : ಹಾಕಿ ಪಂದ್ಯಾವಳಿಯನ್ನು ದಿನಾಂಕ : 13ನೇ ಜುಲೈ 2023ರಂದು ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್‌ನ ಕ್ರೀಡಾಂಗಣದಲ್ಲಿ ನಡೆಸಲಾಗುವುದು. ಸದರಿ ಕ್ರೀಡೆಗಳಲ್ಲಿ ಭಾಗವಹಿಸುವ ಎಲ್ಲಾ ತಂಡಗಳು ದಿನಾಂಕ: 13.07.2023ರ ಬೆಳಗ್ಗೆ 9.30ಘಂಟೆಗೆ ಹಾಜರಿರಲು ಸೂಚಿಸಲಾಗಿದೆ. ಹೊರಗಡೆಯಿಂದ ಬರುವ ತಂಡಗಳಿಗೆ ದಿನಾಂಕ: 12.07.2023ರಂದು ದೈಹಿಕ ಶಿಕ್ಷಣ ವಿಭಾಗದಲ್ಲಿ ವಸತಿ ಸೌಲಭ್ಯವನ್ನು ಪಡೆಯಲು ಸೂಚಿಸಲಾಗಿದೆ.

ದಿನಾಂಕ: 15.07.2023 ರಿಂದ 17.07.2023ರವರೆಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇಲ್ಲಿ ನಡೆಯುವ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಹೊರಗಡೆಯಿಂದ ಬರುವ ಕಾಲೇಜುಗಳ ತಂಡಗಳಿಗೆ 14ನೇ ಜುಲೈ 2023ರ ಬೆಳಗ್ಗೆ 10.00ಘಂಟೆಯಿಂದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗುವುದು. ಕ್ರೀಡಾಕೂಟದಲ್ಲಿ ಭಾಗವಹಿಸಲು ಹಾಗೂ ತಂಡಗಳಿಗೆ ವಸತಿ ಸೌಕರ್ಯ ನೀಡಲು ತಂಡಗಳ ಜೊತೆಯಲ್ಲಿ ವ್ಯವಸ್ಥಾಪಕರು ಕಡ್ಡಾಯವಾಗಿರಬೇಕು ವಸತಿ ಸೌಕರ್ಯ ಪಡೆಯಲು ರೂ. 500-00 (ರೂ. ಐದು ನೂರು ರೂಪಾಯಿಗಳು) ಎಚ್ಚರಿಕೆ ಹಣವನ್ನು ವಸತಿ ವ್ಯವಸ್ಥೆಯ ಅಧಿಕಾರಿಯವರಲ್ಲಿ ಸಂದಾಯ ಮಾಡಬೇಕು. ಸದರಿ ಹಣವನ್ನು ಪಂದ್ಯಾವಳಿ ಮುಗಿದ ನಂತರ ವಾಸ್ತವ್ಯದ ಸ್ಥಳದಲ್ಲಿ ಯಾವುದೇ ಹಾನಿ ಮಾಡದಿದ್ದಲ್ಲಿ ಹಿಂದಿರುಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಡಾ. ಕೆ.ಎಸ್.ಭಾಸ್ಕರ್, ದೈಹಿಕ ಶಿಕ್ಷಣ ನಿರ್ದೇಶಕರು ಇವರ ಮೊಬೈಲ್ ಸಂಖ್ಯೆ : 9902436574 ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಕ್ರೀಡಾಕೂಟದಲ್ಲಿ ಭಾಗವಹಿಸುವ ವಿವಿಧ ಕಾಲೇಜಿನ ಕ್ರೀಡಾ ತಂಡಗಳು ಕ್ರೀಡೆ ನಡೆಯುವ ಸಮಯದಲ್ಲಿ ಹಾಗೂ ವಸತಿ ಸೌಕರ್ಯ ಒದಗಿಸಿರುವ ಜಾಗದಲ್ಲಿ ಶಿಸ್ತು ಸಂಯಮ ಹಾಗೂ ಸಮಯ ಪಾಲನೆಗೆ ಹೆಚ್ಚು ಮಹತ್ವವನ್ನು ನೀಡಲು ಆಯೋಜಕರು ತೀರ್ಮಾನಿಸಿದ್ದು, ಇದನ್ನು ಉಲ್ಲಂಘಿಸಿದ ಕ್ರೀಡಾ ತಂಡಗಳನ್ನು ಕ್ರೀಡಾಕೂಟದಿಂದ ಹಾಗೂ ವಸತಿ ನಿಲಯದಿಂದ ಹೊರ ಹಾಕಲಾಗುವುದು. ಆದುದರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಕ್ರೀಡಾಪಟುಗಳಿಗೆ ಕ್ರೀಡಾಕೂಟದ ಸಮಯದಲ್ಲಿ ಶಿಸ್ತಿನಿಂದ ವರ್ತಿಸಲು ಆದೇಶಿಸಬೇಕಾಗಿ ಕೋರಿಕೆ. ಯಾವುದೇ ತಂಡ ಅಶಿಸ್ತಿನಿಂದ ವರ್ತಿಸಿದರೆ ಆ ತಂಡದ ವ್ಯವಸ್ಥಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜಿನ ಪ್ರಾಂಶುಪಾಲರು ಹೊಣೆಯಾಗಿರುತ್ತಾರೆ. ಮೇಲಿನ ಅಂಶವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲು ಕೋರಲಾಗಿದೆ.

ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಆಟಗಾರರು ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ನಿಗದಿಪಡಿಸಿರುವ ನಮೂನೆಯಲ್ಲಿ ಇತ್ತೀಚಿನ ಭಾವಚಿತ್ರದ ಮೇಲೆ ಪ್ರಾಂಶುಪಾಲರುಗಳ ಸಹಿ ಮತ್ತು ಮೊಹರು ಇರುವ "ಗುರುತಿನ ಚೀಟಿ"ಯನ್ನು ಕಡ್ಡಾಯವಾಗಿ ಹೊಂದಿರಬೇಕು, ಇಲ್ಲದಿದ್ದಲ್ಲಿ ಆಟಗಾರರಿಗೆ ಪಂದ್ಯಗಳಲ್ಲಿ ಭಾಗವಹಿಸಲು ಬಿಡುವುದಿಲ್ಲ.

2022-23ನೇ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಂತರ ಕಾಲೇಜು ಕ್ರೀಡಾಕೂಟದಲ್ಲಿ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಯಥಾವತ್ತಾಗಿ ಅಳವಡಿಸಿಕೊಂಡಿರುವುದರಿಂದ ಭಾಗವಹಿಸುವ ತಂಡದ ಆಟಗಾರರು ನಿಗದಿಪಡಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ ಹಾಗೂ ಆಟಗಾರರ ಅರ್ಹತಾ ದಾಖಲೆಯ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸಲು ಸೂಚಿಸಲಾಗಿದೆ.

ಮೇಲಿನ ಸೂಚನೆಗಳನ್ನು ಮತ್ತು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕ್ರೀಡಾ ಕಾರ್ಯನೀತಿಯ ಕೈಪಿಡಿಯಲ್ಲಿ (Sports Policy Handbookನಲ್ಲಿ) ತಿಳಿಸಿರುವ ನಿಯಮಗಳನ್ನು ತಮ್ಮ ಕಾಲೇಜಿನ ತಂಡಗಳ ವ್ಯವಸ್ಥಾಪಕರು ಹಾಗೂ ಆಟಗಾರರು ಪಾಲಿಸುವಂತೆ ತಿಳಿಸಬೇಕಾಗಿ ಕೋರುತ್ತಾ ಈ ಕ್ರೀಡಾಕೂಟದ ಯಶಸ್ಸಿಗೆ ತಮ್ಮ ಸಂಪೂರ್ಣ ಸಹಕಾರ ನೀಡಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
6/7/23
(ಡಾ. ಸಿ. ವೆಂಕಟೇಶ್)
ನಿರ್ದೇಶಕರು

TO,
Sri Bhaskar. J
Manjunatha M.K
12/7/23

ಪ್ರತಿಗಳನ್ನು ವಂದನಾಪೂರ್ವಕವಾಗಿ:

1. ಚಾಮುಂಡಿ/ಚಾಮರಾಜ/ಮಂಡ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಸಂಚಾಲಕರುಗಳು ತಮ್ಮ ವಲಯದ ವಿವಿಧ ಕ್ರೀಡೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ವಲಯ ಮಟ್ಟದ ಪಂದ್ಯಾವಳಿಗಳ ಫಲಿತಾಂಶದ ಪಟ್ಟಿಯನ್ನು ನಿರ್ದೇಶಕರಿಗೆ ದಿನಾಂಕ : 06.07.2023ರೊಳಗೆ ಕಳುಹಿಸಲು ಕೋರಲಾಗಿದೆ. ಈ ಪತ್ರವನ್ನು ತಮ್ಮ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

|| Jai Sri Gruduev ||

# Sri Adichunchanagiri First Grade College

**Chananrayapatna-573116**

## Department of Physical Education and Sports

**Date:- 17-07-2023**

### Report on Interzone Intercolligiate Women's Tournament 2022-23 at Hunusur

Department of Physical Education and Sports, Sri Adichunachangiri First Grade College Students has participated in a UOM Interzone Intercolligiate Women's Tournament 2022-23 at Hunusur, which was organized by Government Women's First Grade College, Hunsur on 15th to 17th July 2023. The team was led by Mr.Bhaskara.J, Physical Education Instructor and Mrs. Kavitha J.N. was accompanied as a team manager to take care of the students. Ten teams participated in the Kabaddi game in this tournament; our college team secured the 4th position.







Physical Education Director
Sri Adichunchanagiri First Grade College
Channarayapatna-573116

Principal
Sri Adichunchanagiri First Grade Collage
Channarayapatna-573 115


Interzone Intercolligiate Women's Tournament 2022-23 at Hunusur on 17-07-2023












Physical Education Director
Sri Adichunchanagiri First Grade College
Channarayapatna-573116

Principal
Sri Adichunchanagiri First Grade College
Channarayapatna-573 116

ಗೆ,

ಪ್ರಾಂಶುಪಾಲರು

ಶ್ರೀ ಆದಿಚುಂಚನಗಿರಿ ಪ್ರ. ದ. ಕಾಲೇಜು.

ಚನ್ನರಾಯಪಟ್ಟಣ.

ಮಾನ್ಯರೆ.

ವಿಷಯ: ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಕುಸ್ತಿಯಲ್ಲಿ ಪ್ರತಿನಿಧಿಸಲು ಭಾಗವಹಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 15/07/2023 ರಿಂದ 17/07/2023 ರ ವರೆಗೆ ನಡೆಯುವ ಮೈಸೂರು ಮಹಾರಾಜ ಕಾಲೇಜು ಆಯೋಜಿಸಿರುವ ಮೈಸೂರು ವಿವಿ ಅಂತರ ವಲಯ ... ನಮ್ಮ ಕಾಲೇಜಿನ ಮೈಸೂರು ವಿಭಾಗ ತಂಡವು ಭಾಗವಹಿಸಲು ಈ ಕೆಳಕಂಡ ವಿದ್ಯಾರ್ಥಿಗಳನ್ನು ಕಳುಹಿಸಿಕೊಡಲು ಅನುಮತಿ ನೀಡಬೇಕಾಗಿ ವಿನಂತಿ. ಜೊತೆ ವ್ಯವಸ್ಥಾಪಕರಾಗಿ ... ಕಳುಹಿಸಿಕೊಡಲು

| ಕ್ರ. ಸ. | ಹೆಸರು | ತರಗತಿ |
|---|---|---|
| 1. | ಚೇತನ ಪ್ರಸಿದ್ಧ | III B.A |
| 2. | ಸ್ವಾತಿ. ಕೆ ಆರ್ | III B.Com |
| 3. | ಶಿಲ್ಪ ಬಿ. ಎಂ | III B.Com |
| 4. | ಸ್ವಾತಿ ಎ. ಆರ್ | II B.Sc |
| 5. | ಭೂಮಿಕ | II B.Sc |
| 6. | ನಂದಿತ | I B.Sc |
| 7. | ಮೇಘನ ಹೆಚ್. ಎನ್ | I B.Sc |
| 8. | ಚಂದನ ಕೆ. ಎಂ | I B.Com |
| 9. | ಪವಿತ್ರ. | III B.A |
| 10. | ಲಕ್ಷ್ಮಿ ಎ. | III B.Com. |
| 11 | ಸಂಗೀತ | II B.Sc |
| 12 | ಚಿನ್ನಮ್ಮ | I B.Com. |

Physical Education Director
Sri Adichunchanagiri First Grade College
Channarayapatna-573116

ಪ್ರಾಂಶುಪಾಲರು 14/07/23
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ-573 116